ಎಂದು ಸಾಕಷ್ಟು ಎಚ್ಚರ ವಹಿಸಿ, “ಬೀಮಾ.... ಆ ಟಾಯ್ಲೆಟ್ ಸ್ವಚ್ಛವಾಗಿದೆಯೋ ಇಲ್ಲವೋ ಒಂದಿಷ್ಟು ನೋಡು. ಇಲ್ಲವಾದರೆ.... ಆ ಹುಡುಗಿಯನ್ನು ಕಳಿಸಿ ಒಂದಿಷ್ಟು ಕ್ಲೀನ್ ಮಾಡಿಸು” ಎಂದಳು.

ಬೀಮಾ ಕೂಡಾ ಸೆರಗಿನಲ್ಲಿ ಕೈಯೊರಸಿಕೊಳ್ಳುತ್ತಾ, “ಈಗಷ್ಟೇ ನಮಾಜಿನ ಸಲುವಾಗಿ ನಾನು ಕೈಕಾಲು ತೊಳೆಯಲು ಹೋಗಿದ್ದೆ... ಸ್ವಚ್ಛವಾಗಿದೆ ಭಾಬಿ...” ಎಂದವಳೇ, “ತಾಳಿ... ಆದರೂ ಒಮ್ಮೆ ನೋಡಿ ಬರ್ತೀನೆ...” ಎಂದು ಹೋಗಿ ನೋಡಿ ಬಂದು... “ಇಲ್ಲಾ... ಭಾಬಿ ತುಂಬಾ ಕ್ಲೀನಾಗಿದೆ” ಎಂದು ವರದಿಯನ್ನೊಪ್ಪಿಸಿದಳು.

ಜೀನತ್ ಅನುಮಾನದಿಂದ ನೋಡುತ್ತಾ, “ಏನೋ ದುರ್ವಾಸನೆ ಬರ್ತಿದ್ದ ಹಾಗೇ ಕಾಣ್ತಿದೆ ಅಲ್ವಾ?...'' ಎಂದು ಕೇಳಿದ್ದಕ್ಕೆ,

“ಇಲ್ವಲ್ಲಾ... ನಂಗೇನೂ ಬರ್ತಾ ಇಲ್ಲಾ.... ಒಂದಿಷ್ಟು ಸೆಂಟ್‌ಹಚ್ಚಿಕೊಳ್ಳಿ ಭಾಬಿ...” ಎಂದು ಪ್ರಾಮಾಣಿಕ ಸಲಹೆಯನ್ನಿತ್ತು ತನ್ನ ಕೆಲಸದಲ್ಲಿ ತೊಡಗಿಕೊಂಡಳು.

ಜೀನತ್‌ಗೆ ಮತ್ತೊಂದು ಬಾರಿ ಕೋಪದ ಸೆಲೆ ಏರಿತು... ''ಸೆಂಟಂತೆ... ಸೆಂಟು...” ಎಂದು ತನ್ನಲ್ಲಿಯೇ ಗೊಣಗಿಕೊಂಡು ಹಜಾರದಲ್ಲಿ ಹೋಗಿ ಕುಳಿತಳು. ಅಲ್ಲಿಗೂ ಹಿಂಬಾಲಿಸಿ ಬರಬೇಕೇ ಆ ಕೆಟ್ಟವಾಸನೆ. ಯಾವುದಾದರೂ ಶೌಚಾಲಯದ ಪೈಪ್ ಒಡೆದಿರಬಹುದೇ? ಅವಳು ಮತ್ತೊಂದು ಸಾರಿ ವೇಗವಾಗಿ ಮೇಲಿಂದ ಕೆಳಗಿನವರೆಗೂ ಸರ್ವೆ ನಡೆಸಿ ಬಂದಳು.

ಹೊತ್ತು ಸರಿದಂತೆಲ್ಲಾ ಅವಳ ಯಾವ ಪ್ರಯತ್ನವೂ ಫಲಕಾರಿಯಾಗಲಿಲ್ಲ. ಆದರೆ ದುರ್ವಾಸನೆ ದಟ್ಟವಾಗತೊಡಗಿತ್ತು. ದುರ್ವಾಸನೆಯ ಮೂಲ ಪತ್ತೆಯಾಗದೆ, ಅದನ್ನು ಸಹಿಸಲೂ ಆಗದೆ ಆಕೆ ತೀವ್ರ ತಳಮಳಕ್ಕೆ ಒಳಗಾದಳು. ಮತ್ತೊಮ್ಮೆ ಹಟಕ್ಕೆ ಬಿದ್ದಂತೆ ಅವಳು ಹಿಂಬದಿಯ ಅಂಗಳಕ್ಕೆ ಬಂದಳು. ಈಗಂತೂ ಆ ದುರ್ವಾಸನೆ ಧಾಳಾಗಿ ಅವಳ ನಾಸಿಕಕ್ಕೆ ಅಡರುತ್ತಿತ್ತು. ಅಂಗಳದ ಮೂಲೆ ಮೂಲೆಯನ್ನು ಹುಡುಕಿದರೂ ಏನೂ ಕಂಡು ಬರಲಿಲ್ಲ.

ಅಸರ್ ನಮಾಜಿನ ಹೊತ್ತಿಗೆ, ಆಕೆಯ ಸುತ್ತಮುತ್ತಲೆಲ್ಲಾ ದುರ್ಗಂಧವೇ ಹರಡಿದಂತಾಗಿ ಅವಳ ಸೈರಣೆ ಮೀರುತ್ತಿತ್ತು. ಅಡಿಗೆಯವರ ಕೆಲಸ ಮುಗಿದಿತ್ತು. ಸಂಜೆ ಆರರ ಹೊತ್ತಿಗೆ ಡೈನಿಂಗ್ ಟೇಬಲ್ಲಿನ ಮೇಲೆ ಇಫ್ತಾರ್‌ನ ಭಕ್ಷ್ಯಗಳನ್ನು ಜೋಡಿಸಿಟ್ಟು ತಾವೊಂದಿಷ್ಟು ಟಿಫನ್ ಕ್ಯಾರಿಯರ್‌ನಲ್ಲಿ ಹಾಕಿಕೊಂಡು ಬೀಮಾ ಮತ್ತು ಆ ಹುಡುಗಿ ತಮ್ಮ ಮನೆಗಳಿಗೆ ಹೋದರು.

ಇಫ್ತಾರಿಯ ಸಲುವಾಗಿ ಖರ್ಜೂರ, ಕಲ್ಲಂಗಡಿ, ಸಮೋಸಾ, ಫಾಲೂದ (ಹಾಲುಬಾಯಿ) ಜೊತೆಯಲ್ಲಿ ದೇಹಕ್ಕೆ ತಂಪು ನೀಡುವ ಕಾಮಕಸ್ತೂರಿಬೀಜ, ಬಾದಾಮಿಯ ಶರಬತ್ತು ಎಲ್ಲದರ ಜೊತೆಯಲ್ಲಿ ಆ ದರಿದ್ರ ದುರ್ವಾಸನೆ.

ಅವಳು ಮನೆಬಾಗಿಲಿನಲ್ಲಿಯೇ ನಿಂತು, ಬಂದ ಅನೀಸ್‌ಗೂ, ಸಾದಿಕ್‌ಗೂ ಗಂಡನಿಗೂ ಆ ದುರ್ಗಂಧದ ಸವಿಸ್ತಾರ ವರದಿಯನ್ನು ಪರಿಹರಿಸುವಂತೆ ಒತ್ತಾಯಿಸಿದಳು.

ಆದರೆ, ಅವಳ ಸಮಸ್ಯೆಯ ಬಗ್ಗೆ ಅವರ್‍ಯಾರಿಗೂ ಸಹಾನುಭೂತಿ ಇದ್ದಂತಿರಲಿಲ್ಲ. ಬೆಳಗಿನಿಂದ ಉಪವಾಸವಿದ್ದ ಅವರೆಲ್ಲಾ ಆಯಾಸಗೊಂಡಿದ್ದರು. ಅವರೆಲ್ಲಾ ಇಫ್ತಾರಿಯಲ್ಲಿ ಮಾತ್ರ ಆಸಕ್ತರಾಗಿದ್ದರು. ಸಾದಿಕ್‌ನಂತೂ ಅಸಹನೆಯಿಂದ, “ಆ ಹಿಂದಿನ ಬಾಗಿಲನ್ನು ಹಾಕಿ ಬಿಡಿ ಅಮ್ಮಿ... ಏನಿದ್ದರೂ ನಾಳೆ ನೋಡೋಣ...'' ಎಂದ.

ಅನೀಸ್‌ಗೆ ತಾಯಿಯ ಆತಂಕ ವಿನೋದವೆನಿಸಿತು. ಸಾದಿಕ್‌ನ ಮಗಳೊಡನೆ ಆಡವಾಡುತ್ತಾ ತಲೆಯ ಮೇಲಿನ ಟೊಪ್ಪಿಯನ್ನು ಸರಿಮಾಡುತ್ತಾ “ನನಗೆನಿಸುತ್ತೆ... ಆ ನಿಮ್ಮ ಸೈಟನ್ನು ಹೊಡಕೊಂಡು, ಅಲ್ಲಿ ಕಾಡು ಬೆಳೆಸಿದಾನಲ್ಲಾ, ಅದೇ ನಿಮ್ಮ ಭಾಷೆಯಲ್ಲಿ ಹೇಳುವುದಾದರೆ, ನಮಕ್